## ಮಾಂಗಲ್ಯಂ ತಂತುನಾನೇನ ....

ಕಬ್ಬಿನಾಲೆ ಕುಚ್ಚೂರು ಶ್ರೀಮತಿ ಮತ್ತು ಶ್ರೀ ಕೃಷ್ಣಯ್ಯ ಹೆಬ್ಬಾರರ ಪುತ್ರ **ಸತೀಶ** ಮತ್ತು ಶ್ರೀಮತಿ ಮತ್ತು ಶ್ರೀ ಬಿ. ಕೆ. ಲಕ್ಷ್ಮೀನಾರಾಯಣ ರಾವ್‌ರ ಪುತ್ರಿ **ಪದ್ಮಶ್ರೀ** ಇವರ ವಿವಾಹವು ತಾ.24-02-2008ರಂದು ಬಾರ್ಕೂರು ವೇಣುಗೋಪಾಲಕೃಷ್ಣ ಕಲ್ಯಾಣ ಮಂಟಪದಲ್ಲಿ ನೆರವೇರಿತು.

* * * * *

ಬೆಂಗಳೂರಿನ ಜಾಲಹಳ್ಳಿಯಲ್ಲಿ ವಾಸ್ತವ್ಯ ದಲ್ಲಿರುವ ಶ್ರೀಮತಿ ಮತ್ತು ಶ್ರೀ ಎಚ್. ಪ್ರಕಾಶ್ ಮೇರ್ಟ ಇವರ ಪುತ್ರ **ಸಂತೋಷ್** ಹಾಗೂ ಕುಕ್ಕುಂದೂರು ಶ್ರೀಮತಿ ಮತ್ತು ಶ್ರೀ ನಾರಾಯಣ ರಾಯರ ಪುತ್ರಿ **ವಿನುತ** ಇವರ ವಿವಾಹವು ತಾ.02-03-2008ರಂದು ಕುಂಜಿಬೆಟ್ಟಿನ ಶ್ರೀ ಶಾರದಾ ಮಂಟಪದಲ್ಲಿ ನೆರವೇರಿತು.

* * * * *

ಶ್ರೀ ಬಿ.ಕೆ. ಸುಬ್ಬರಾವ್‌ರ ಪುತ್ರ **ಜ್ಞಾನೇಶ್** ಹಾಗೂ ಪಡುಮಲೆ ಶ್ರೀನಿವಾಸರಾಯರ ಪುತ್ರಿ **ಸುಕನ್ಯಾ** ಇವರ ವಿವಾಹವು ತಾ.15-02-2008ರಂದು ಮಂಗಳೂರಿನ ಅಶೋಕನಗರದ ಗೋಕುಲ ಕಲ್ಯಾಣಮಂಟಪದಲ್ಲಿ ನೆರವೇರಿತು.

* * * * *

ಮೈಸೂರಿನ ಮಳವಳ್ಳಿ ರಾಜಶೇಖರ ರಾಯರ ಪುತ್ರ **ಪ್ರಶಾಂತ** ಹಾಗೂ ಬಾಡೇಲು ದಿನೇಶರಾಯರ ಪುತ್ರಿ **ಧನ್ಯತಾ** ಇವರ ವಿವಾಹವು ತಾ.02-03-2008ರಂದು ಪುತ್ತೂರು ಮಹಾಮಾಯಾ ದೇವಸ್ಥಾನದ ಕಲ್ಯಾಣಮಂಟಪದಲ್ಲಿ ನೆರವೇರಿತು.

* * * * *

ಶ್ರೀಮತಿ ಮತ್ತು ಶ್ರೀ ಲಕ್ಷ್ಮೀಕಾಂತ ಇವರ ಪುತ್ರಿ **ಶ್ಯಾಮಿಲಿ** ಮತ್ತು ಕೀರ್ತಿಶೇಷ ಕಲ್ಲೊಟ್ಟು ಗಣೇಶ್‌ರಾಯರ ಪುತ್ರ **ರಾಘವೇಂದ್ರ** ಇವರ ವಿವಾಹವು ತಾ.10-03-2008ರಂದು ಕಾರ್ಕಳ ಕುಕ್ಕುಂದೂರು ಜೋಡುರಸ್ತೆ ದುರ್ಗಾಪರಮೇಶ್ವರಿ ದೇವಸ್ಥಾನದಲ್ಲಿ ನೆರವೇರಿತು.

* * * * *

ಮುಂಬೈನಲ್ಲಿ ವಾಸ್ತವ್ಯದಲ್ಲಿರುವ ಶ್ರೀಮತಿ ವಿದ್ಯಾ ಮತ್ತು ಶ್ರೀ ಸುರೇಶ್ ಆರ್. ರಾವ್ ಇವರ ಪುತ್ರ **ಕ್ಷಿತಿಜ್** ಹಾಗೂ ಶ್ರೀಮತಿ ಶೋಭಾ ಮತ್ತು ದಿ। ಚಂದ್ರಶೇಖರ ರಾಯರ ಪುತ್ರಿ **ಚೇತನಾ** ಮತ್ತು ಇವರ ವಿವಾಹವು ತಾ.25-02-2008ರಂದು ಕುಂಜಿಬೆಟ್ಟಿನ ಶ್ರೀ ಶಾರದಾ ಮಂಟಪದಲ್ಲಿ ನೆರವೇರಿತು.

* * * * *

ಶ್ರೀಮತಿ ಸರೋಜ ಮತ್ತು ಶ್ರೀ ರಂಗನಾಥರಾವ್‌ರ ಪುತ್ರ **ಕುಮಾರಸ್ವಾಮಿ** ಮತ್ತು ಶ್ರೀಮತಿ ಪದ್ಮಿನಿ ಹೆಬ್ಬಾರ್ ಮತ್ತು ಶ್ರೀ ನರಸಿಂಹ ಹೆಬ್ಬಾರ್ ಇವರ ಪುತ್ರಿ **ಸೌಮ್ಯ** ಇವರ ವಿವಾಹವು ತಾ.24-02-2008ರಂದು ಬೆಂಗಳೂರಿನ ಬನ್ನೇರುಘಟ್ಟ ಮಾರ್ಗದಲ್ಲಿರುವ ಶ್ರೀ ಶಾರದಾ ಕಲ್ಯಾಣ ಮಂಟಪದಲ್ಲಿ ನೆರವೇರಿತು.

* * * * *

ಕಾರೇಬೈಲಿನ ಶ್ರೀಮತಿ ಗೀತಾ ಮತ್ತು ಶ್ರೀ ಶಂಕರರಾಯರ ಪುತ್ರಿ **ವಿನಯ** ಮತ್ತು ಸುರತ್ಕಲ್ ಹೊಸಬೆಟ್ಟಿನ ಶ್ರೀಮತಿ ಸುಕನ್ಯಾ ಹರಿಶ್ಚಂದ್ರರಾಯರ ಪುತ್ರ **ರಾಜಶೇಖರ್** ಇವರ ವಿವಾಹವು ತಾ.02-03-2008ರಂದು ಕುಂದಾಪುರದತಾಲೂಕು ಸಿದ್ದಾಪುರ ಕೆಳಪೇಟೆಯಲ್ಲಿರುವ ಶ್ರೀ ಅನಂತ ಪದ್ಮನಾಭ ಸಭಾಗೃಹದಲ್ಲಿ ನೆರವೇರಿತು.

## ಕುಂಭ ಮಾಸದ ವಿಶೇಷ ದಿನಗಳು

| | |
|---|---|
| 14-03-2008 | ಮೀನ ಸಂಕ್ರಮಣ, |
| 17-03-2008 | ಸರ್ವೈಕಾದಶೀ ಉತ್ತರಾಭಾದ್ರಾ ನಕ್ಷತ್ರಾರಂಭ |
| 19-03-2008 | ಪ್ರದೋಷಃ |
| 21-03-2008 | ಪೂರ್ಣಿಮಾ |
| 25-03-2008 | ಸಂಕಷ್ಟ ಚತುರ್ಥೀ (ಚಂದ್ರೋದಯ ರಾತ್ರಿ ಗಂ.9-39ಕ್ಕೆ) |
| 30-03-2008 | ರೇವತೀ ನಕ್ಷತ್ರಾರಂಭ |
| 02-04-2008 | ಸರ್ವೈಕಾದಶೀ |
| 03-04-2008 | ಪ್ರದೋಷಃ |
| 06-04-2008 | ಅಮವಾಸ್ಯೆ, ಚಾಂದ್ರಯುಗಾದಿ |
| 13-04-2008 | ಮೇಷ ಸಂಕ್ರಮಣ |

## ಅಭಿನಂದನೆ

### ಕು। ಪ್ರಗತಿ ಭಂಡಿ



ಮಣಿಪಾಲ ವಿ.ವಿ. ಆಶ್ರಯದಲ್ಲಿ ರಾಷ್ಟ್ರೀಯ ವಿಜ್ಞಾನ ದಿನದ ಅಂಗವಾಗಿ ಮಣಿಪಾಲದಲ್ಲಿ ಸ್ಪರ್ಧೆಗಳು ನೆರವೇರಲ್ಪಟ್ಟು, ಹಿರಿಯ ಪ್ರಾಥಮಿಕ ಶಾಲಾ ವಿಭಾಗದಲ್ಲಿ ಸೈನ್ಸ್ ಸೆಮಿನಾರ್ ಸ್ಪರ್ಧೆಯಲ್ಲಿ ಮಣಿಪಾಲ ಪ.ಪೂ. ಕಾಲೇಜಿನ 6ನೇ ತರಗತಿಯ ವಿದ್ಯಾರ್ಥಿನಿ ಕು। ಪ್ರಗತಿ ಭಂಡಿ ಪ್ರಥಮ ಬಹುಮಾನ ಗಳಿಸಿರುತ್ತಾಳೆ.

ತಾ.28-02-2008ರಂದು ಮಣಿಪಾಲದಲ್ಲಿ ನಡೆದ ಬಹುಮಾನ ವಿತರಣಾ ಸಮಾರಂಭದಲ್ಲಿ ಮಂಗಳೂರು ವಿ.ವಿ. ಗೌರವಾನ್ವಿತ ಕುಲಪತಿಗಳಾದ ಡಾ। ಕೆ. ಎಂ. ಕಾವೇರಪ್ಪನವರಿಂದ ಬಹುಮಾನ ಹಾಗೂ ಪ್ರಮಾಣ ಪತ್ರವನ್ನು ಸ್ವೀಕರಿಸಿದಳು.

ಪೆರ್ಡೂರು ಶ್ರೀ ರವೀಂದ್ರ ಭಂಡಿ ಹಾಗೂ ಶ್ರೀಮತಿ ವಾಣಿಭಂಡಿ ದಂಪತಿಗಳ ಪುತ್ರಿಯಾಗಿರುವ ಈಕೆಯ ಸಾಧನೆಗೆ ಶ್ರೀ ಶಾರದಾ ಅಭಿನಂದನೆಗಳು.

## ಚಿನ್ನದ ದೀಪದಲ್ಲಿ ಮರಿಮೊಮ್ಮಗನ ಮುಖದರ್ಶನ



ದಿ। ಶ್ರೀ ಮೂಡಸರಿಗೆ ಈಶ್ವರಪ್ಪಯ್ಯನವರ ಧರ್ಮಪತ್ನಿ ರಾಜಮ್ಮನವರು ತಮ್ಮ ಮಗ ಎಮ್. ಆನಂದ ರಾವ್ ಮತ್ತು ಗೌರಿ ಅವರ ಮಗ ಶ್ರೀ ಎಮ್. ಅಶೋಕ ಮತ್ತು ಚೈತನ್ಯಳ ಮಗ ಚಿ। ಅದ್ವೈತ ಚಿನ್ಮಯನನ್ನ ಚಿನ್ನದ ದೀಪದಲ್ಲಿ ಮೊದಲಬಾರಿಗೆ ನೋಡಿದರು. ಇಂತಹದೊಂದು ಅಪರೂಪವಾದ ಕಾರ್ಯಕ್ರಮವು ಬಿ.ಸಿ.ರೋಡ್‌ನ ಕೇದಾರದಲ್ಲಿ ಪರಾರಿ ಮುರಳೀಧರರಾವ್ ಮತ್ತು ಅರುಣಾವತಿಯವರ ಸಮಕ್ಷಮದಲ್ಲಿ 04-02-2008ರಂದು ನಡೆಯಿತು.

## ನಿಧನ

### ವೈ. ಸಂಜೀವರಾವ್

ಎರ್ಮಾಳಿನ ವೈ. ಸಜೀವ ರಾವ್ (84 ವರ್ಷ) ಇವರು ತಾ.04-02-2008ರಂದು ನಿಧನ ಹೊಂದಿದರು. ಮೃತರು ಪತ್ನಿ, ಮೂವರು ಪುತ್ರರು, ಓರ್ವ ಹೆಣ್ಣು ಮಗಳ ಸಹಿತ ಅಪಾರ ಬಂಧುಬಾಂಧವರನ್ನು ಅಗಲಿರುತ್ತಾರೆ.

* * * * *

### ತಂಗಮ್ಮ ಬಾರಕೂರು

ಬಾರಕೂರು ದಿ। ವೆಂಕಟರಾಯರ ಧರ್ಮಪತ್ನಿ ತಂಗಮ್ಮನವರು (96 ವರ್ಷ) ದಿನಾಂಕ 01-02-2008ರಂದು ವೃದ್ಧಾಪ್ಯದಿಂದ ಸ್ವಗೃಹದಲ್ಲಿ ನಿಧನರಾದರು. ಹಿಂದೆ ಶಾಲಾಮಕ್ಕಳಿಗೆ ಊಟೋಪಚಾರ ವ್ಯವಸ್ಥೆ ಮಾಡುತ್ತಿದ್ದ ಮೃತರು ಜನಾನುರಾಗಿಗಳಾಗಿದ್ದರು. ಮೃತರು ಮೂವರು ಪುತ್ರಿಯರು ಹಾಗೂ ಅಪಾರ ಬಂಧುಬಾಂಧವರನ್ನು ಅಗಲಿರುತ್ತಾರೆ.

* * * * *

### ಲಕ್ಷ್ಮೀ ಅಮ್ಮ ಬಾರಕೂರು

ಮಸ್ಕಿಬೈಲು ದಿ। ಶ್ರೀನಿವಾಸರಾಯರ ಪತ್ನಿ ಲಕ್ಷ್ಮಮ್ಮನವರು (85 ವರ್ಷ) ತಾ.13-2-2008 ರಂದು ಸ್ವಗೃಹದಲ್ಲಿ ನಿಧನರಾದರು. ಗ್ರಾಮೀಣ ಪ್ರದೇಶದಲ್ಲಿ ವೈದ್ಯಕೀಯ ದುರ್ಲಭವಾಗಿದ್ದ ಆ ಕಾಲದಲ್ಲಿ ತಮ್ಮ ಸ್ವಂತ ಅನುಭವದ ನೆಲೆಯಲ್ಲಿ ಹಳ್ಳಿಯ ಮದ್ದು ಹಾಗೂ ಗರ್ಭಿಣಿಯರ ಹೆರಿಗೆಗಳನ್ನು ಮಾಡಿಸುವುದು ಮೊದಲಾದ ರೀತಿಯಲ್ಲಿ ವೈದ್ಯಕೀಯ ಸೇವೆಗೈದು ಬಾರಕೂರು ಆಸುಪಾಸಿನಲ್ಲಿ ಚಿರಪರಿಚಿತರಾಗಿದ್ದರು. ಮೃತರು ಬಾರಕೂರು ದೂರವಾಣಿ ಕೇಂದ್ರದ ಅಧಿಕಾರಿ ಯಂ. ಜಯರಾಮರಾವ್ ಹಾಗೂ ನಾಲ್ವರು ಪುತ್ರಿಯರನ್ನು ಹಾಗೂ ಅಪಾರ ಬಂಧುಬಾಂಧವರನ್ನು ಅಗಲಿರುತ್ತಾರೆ.

* * * * *

### ಬೈಲೂರು ಶ್ರೀಪತಿ ರಾವ್

ದಿ। ಬೈಲೂರು ಸದಾಶಿವರಾಯರ ಪುತ್ರ ಬೈಲೂರು ಶ್ರೀಪತಿರಾಯರು (57 ವರ್ಷ) ತಾ.21-02-2008ರಂದು ಹೃದಯಾಘಾತದಿಂದ ಸ್ವಗೃಹದಲ್ಲಿ ನಿಧನರಾದರು. ಸಿಂಡಿಕೇಟ್ ಬ್ಯಾಂಕ್‌ನಲ್ಲಿ ಉದ್ಯೋಗಿಯಾಗಿದ್ದ ಮೃತರು ಮಣಿಪಾಲದ ಕೇಂದ್ರಕಛೇರಿ ಹಾಗೂ ಆಸುಪಾಸಿನ ಹಲವಾರು ಬ್ಯಾಂಕ್ ಶಾಖೆಗಳಲ್ಲಿ ಕಾರ್ಯನಿರ್ವಹಿಸಿದ್ದು ಪ್ರಕೃತ ಉದ್ಯಾವರ ಶಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದರು. ಮೃತರು ತಾಯಿ (ಬೈಲೂರು ವನಜಾಕ್ಷಿ ಅಮ್ಮ) ಸಹಿತ ಓರ್ವ ಪುತ್ರ, ಓರ್ವ ಪುತ್ರಿ ಹಾಗೂ ಅಪಾರ ಬಂಧುಬಾಂಧವರನ್ನು ಅಗಲಿರುತ್ತಾರೆ.

* * * * *

### ಶ್ರೀಮತಿ ವಸಂತಿಯಮ್ಮ

ದಿ। ಅಡೂರು ಕುರ್ನೂರು ಸುಬ್ಬರಾವ್‌ರ ಧರ್ಮಪತ್ನಿ ಶ್ರೀಮತಿ ವಸಂತಿಯಮ್ಮನವರು (74 ವರ್ಷ) ತಾ.12-02-2008ರಂದು ನಿಧನರಾದರು. ಮೃತರು ಇಬ್ಬರು ಪುತ್ರರು, ಇಬ್ಬರು ಪುತ್ರಿಯರು ಹಾಗೂ ಅಪಾರ ಬಂಧುಬಾಂಧವರನ್ನು ಅಗಲಿರುತ್ತಾರೆ.

## ಸೀಮಂತೋನ್ನಯನ

ಬೆಳ್ಮಣ್ಣು ಬೈಲುಮನೆ ದೇವರಾಯರ ಸೊಸೆ ಚಂದ್ರಿಕಾ (ಅರವಿಂದನ ಧರ್ಮಪತ್ನಿ)ಳಿಗೆ ತಾ.30-01-2008ರಂದು ಬೆಳ್ಮಣ್ಣು ಬೈಲುಮನೆಯಲ್ಲಿ ಸೀಮಂತೋನ್ನಯನ ನೆರವೇರಿತು.

ಶ್ರೀಶಾರದಾ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿಯಲ್ಲಿ ಖಾಲಿ ಇದ್ದ ಒಂದು ನಿರ್ದೇಶಕರ ಸ್ಥಾನಕ್ಕೆ ಬಪ್ಪನಾಡು ಕೃಷ್ಣಮೂರ್ತಿರಾವ್ ಅಂಬಲಪಾಡಿ ಅವರು ಆಯ್ಕೆಯಾಗಿದ್ದಾರೆ. ಅವರಿಗೆ ಶ್ರೀಶಾರದಾ ಬಳಗದ ಅಭಿನಂದನೆಗಳು.

ಗೋವಾ ಮಡಗಾಂವ್‌ನಲ್ಲಿರುವ ಶ್ರೀಮತಿ ಮತ್ತು ಶ್ರೀ ಮಾಂಟ್ರಾಡಿ ಶ್ರೀಕಾಂತ್‌ರಾವ್‌ರ ಪುತ್ರ ಎಂ. ವಿವೇಕ್‌ರಾವ್ ಬಿ.ಇ. ಅವರಿಗೆ ಬೆಂಗಳೂರಿನ ವಿಪ್ರೋ ಕಂಪೆನಿಯಲ್ಲಿ ಉದ್ಯೋಗ ಲಭಿಸಿರುತ್ತದೆ. ಅವರಿಗೆ ಶ್ರೀ ಶಾರದಾ ಅಭಿನಂದನೆಗಳು.

## ಬ್ರಹ್ಮೋಪದೇಶ

### ಚಿ। ರವಿಕಿರಣ

ಧರ್ಮಸ್ಥಳದಲ್ಲಿರುವ ಬ್ರಹ್ಮಾವರ ಉದಯರಾವ್ ಹಾಗೂ ಶ್ರೀಮತಿ ವಿನೋದ ಯು. ರಾವ್ ಇವರ ಪುತ್ರ ರವಿಕಿರಣನ ಬ್ರಹ್ಮೋಪದೇಶವು ತಾ.11-01-2008ರಂದು ಧರ್ಮಸ್ಥಳದ ಶಿವಪಾರ್ವತಿ ಕಲ್ಯಾಣ ಮಂಟಪದಲ್ಲಿ ನೆರವೇರಿತು.

* * * * *

### ಚಿ। ಸಂದೇಶ

ಹವರಾಲು ಶ್ರೀಮತಿ ಶೋಭಾ ಮತ್ತು ಶ್ರೀ ರಮೇಶ್‌ರಾವ್ ಇವರ ಪುತ್ರ ಸಂದೇಶನ ಬ್ರಹ್ಮೋಪದೇಶವು ತಾ.09-03-2008ರಂದು ಹವರಾಲಿನ ಸ್ವಗೃಹದಲ್ಲಿ ನೆರವೇರಿತು.

* * * * *

### ಚಿ। ಶ್ರೇಯಸ್

ಶ್ರೀಮತಿ ಉಷಾಕಿರಣ್ ಮತ್ತು ಶ್ರೀ ಮುದ್ದಣ್ಣರಾವ್ ಇವರ ಪುತ್ರ ಶ್ರೇಯಸ್‌ನ ಬ್ರಹ್ಮೋಪದೇಶವು ತಾ.18-02-2008ರಂದು ಕುಂಜಿಬೆಟ್ಟು ಶ್ರೀಶಾರದಾ ಕಲ್ಯಾಣ ಮಂಟಪದಲ್ಲಿ ನೆರವೇರಿತು.

* * * * *

### ಚಿ। ಅನಿರುದ್ಧ

ಶ್ರೀಮತಿ ಗಾಯತ್ರಿ ಮತ್ತು ಶ್ರೀ ಚಂದ್ರಶೇಖರ ಜಿ. ರಾವ್‌ರ ಪುತ್ರ ಅನಿರುದ್ಧನ ಬ್ರಹ್ಮೋಪದೇಶವು ತಾ.9-3-2008 ರಂದು ಮುಂಬಯಿ ಸಯನ್‌ನ ಗೋಕುಲ-ಗೀತ ಗೋವಿಂದ ಹಾಲ್‌ನಲ್ಲಿ ನೆರವೇರಿತು.

## ಗೃಹಪ್ರವೇಶ

ಶ್ರೀಮತಿ ರಜನಿ ಮತ್ತು ಶ್ರೀ ಕೆ. ಮಂಜುನಾಥ ಹೆಬ್ಬಾರ್ ಕುಚ್ಚೂರು, ಕಬ್ಬಿನಾಲೆ (ಶ್ರೀಮತಿ ಮತ್ತು ಶ್ರೀ ಕೆ. ಕೃಷ್ಣಯ್ಯ ಹೆಬ್ಬಾರರ ಪುತ್ರ) ಇವರು ಉಡುಪಿ ಬೈಲಕೆರೆಯಲ್ಲಿ ನಿರ್ಮಿಸಿದ ನೂತನ ಮನೆ 'ವೈಷ್ಣವಿ' ಇದರ ಪ್ರವೇಶೋತ್ಸವವನ್ನು ತಾ.15-2-2008ರಂದು ನೆರವೇರಿಸಿದರು.

* * * * *

ಶ್ರೀಮತಿ ಗೀತಾಂಜಲಿ ಮತ್ತು ಶ್ರೀ ಸುಬ್ಬರಾವ್ ದಂಪತಿಗಳು ಉಡುಪಿ ಕುಕ್ಕಿಕಟ್ಟೆಯಲ್ಲಿ ನಿರ್ಮಿಸಿದ ನೂತನ ಮನೆ 'ವಿಷ್ಣುಪ್ರಸಾದ'ದ ಪ್ರವೇಶೋತ್ಸವವನ್ನು ತಾ.15-02-2008ರಂದು ನೆರವೇರಿಸಿದರು.

* * * * *

ಶ್ರೀಮತಿ ಸ್ವಪ್ನಾ ಮತ್ತು ಶ್ರೀ ಜಯಚಂದ್ರ ಬಿ. ವಿ. ದಂಪತಿಗಳು ಮಂಗಳೂರಿನ ಕೊಡಿಯಾಲ್‌ಬೈಲ್‌ನಲ್ಲಿ ನೂತನವಾಗಿ ಖರೀದಿಸಿರುವ ಫ್ಲ್ಯಾಟ್ 'ನಿನಾದ'(ಡಿ-204) ಇದರ ಪ್ರವೇಶೋತ್ಸವವನ್ನು ತಾ.27-01-2008 ರಂದು ನೆರವೇರಿಸಿದರು.

* * * * *

ಶ್ರೀ ರಮೇಶ್ ಇವರು ಕಾರ್ಕಳದಲ್ಲಿ ಖರೀದಿಸಿದ ಮನೆ 'ಶ್ರೀ ವಿಷ್ಣುಪ್ರಸಾದ'ದ ಪ್ರವೇಶೋತ್ಸವವನ್ನು ತಾ.29-02-2008ರಂದು ನೆರವೇರಿಸಿದರು.


**PRAMOD**
**AUTOMOBILES**
KARANGALPADY, MANGALORE - 575 003.
Ph : 2491723 (O)
2493633 (H.O.)
2212723 (R)
: Wholesale & Retail Dealers in :
2 & 3 WHEELERS SPARES & ACCESSORIES
Prop. : Ln. K. HARSHA KUMAR



ಉಡುಪಿ ವಿಶಿಷ್ಟ ರುಚಿಯುಳ್ಳ
**Rao's 'ಮಾತೃಛಾಯಾ'ರವರ**
ಸಾರಿನ ಹಾಗೂ ಸಾಂಬಾರ್ ಮಸಾಲೆ, ಅಪ್ಪೆಮಿಡಿ ಹಾಗೂ ಮಿಡಿ ಉಪ್ಪಿನಕಾಯಿ
ಹಪ್ಪಳ ಹಾಗೂ ಸೆಂಡಿಗೆಗಳು, ಶುದ್ಧ ದನದ ತುಪ್ಪ ಹಾಗೂ ಜೇನು ತುಪ್ಪ
-: ಮೊದಲಾದ ನಿತ್ಯೋಪಯೋಗಿ ವಸ್ತುಗಳಿಗೆ ಸಂದರ್ಶಿಸಿರಿ :-
**ಭಾರತ್ ಸ್ಟೋರ್ಸ್**
ರಥಬೀದಿ, ಉಡುಪಿ - 576 101. ಫೋನ್ : 2522444